**ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ**

**ಸಿ.ಸಿ. ನಂ. 884/2020**

**ಪಿರ್ಯಾದುದಾರರು :** ನ್ಯಾಮತಿ ಪೊಲೀಸರು.

**- ವಿರುದ್ಧ -**

**ಆರೋಪಿತರು** ಹರೀಶ ಜಿ.ಎಂ. ಬಿನ್ ಮರಿಯಪ್ಪ, 29 ವರ್ಷ,
ವಾಸಃ ಜೀನಹಳ್ಳಿ ಗ್ರಾಮ, ನ್ಯಾಮತಿ ತಾಲ್ಲೂಕು.

**:ದೋಷಾರೋಪಣೆ :**

ಶ್ರೀ ದೇವದಾಸ್ ಹೆಚ್. ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊನ್ನಾಳಿ ಆದ ನಾನು ಮಾಡಿದ ದೋಷಾರೋಪಣೆ ಏನೆಂದರೆಃ

ದಿನಾಂಕಃ 02-02-2020 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ , ನ್ಯಾಮತಿ ಪೊಲೀಸ್ ಠಾಣಾ ವ್ಯಾಪ್ತಿಯ ಜೀನಹಳ್ಳಿ ಗ್ರಾಮದಲ್ಲಿ, ಗಣೇಶ ವಿಸರ್ಜನೆಯ ವೇಳೆ ಬಾಯಿಮಾತಿನ ಜಗಳದ ದ್ವೇಷದ ಹಿನ್ನಲೆಯಲ್ಲಿ ಆರೋಪಿ ಆದ ನೀವು ಸಾಕ್ಷಿ-6 ರವರೊಂದಿಗೆ ಜಗಳ ತೆಗೆದು ಕಬ್ಬಿಣದ ರಾಡಿನಿಂದ ಸಾಕ್ಷಿ-6 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.324 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

2. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ ಆದ ನೀವು ಸಾಕ್ಷಿ-6 ರವರೊಂದಿಗೆ ಜಗಳ ತೆಗೆದು, ಸಾಕ್ಷಿ-6 ಕೆಳಕ್ಕೆ ಕೆಡವಿ ಕೈಗಳಿಂದ ಮೈಕೈಗೆ ಗುದ್ದಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ

ನೀವು ಭಾ.ದಂ.ಸಂ. ಕಲಂ.323 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

3. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ ಆದ ನೀವು ಸಾಕ್ಷಿ-6 ರವರೊಂದಿಗೆ ಜಗಳ ತೆಗೆದು, ಸಾಕ್ಷಿ-6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.504 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

4. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ ಆದ ನೀವು ಸಾಕ್ಷಿ-6 ರವರೊಂದಿಗೆ ಜಗಳ ತೆಗೆದು, ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.506 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಪ್ರತ್ಯೇಕ ಹಾಳೆಗಳಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು).

ಸ್ಥಳ : ಹೊನ್ನಾಳಿ

ದಿನಾಂಕಃ 30-01-2023.

**(ದೇವದಾಸ್ ಹೆಚ್.)**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರು,**
**ಹೊನ್ನಾಳಿ**

ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,
ಹೊನ್ನಾಳಿ

ಸಿ.ಸಿ. ನಂ. 884/2020

ಪಿರ್ಯಾದುದಾರರು : ನ್ಯಾಮತಿ ಪೊಲೀಸರು.

- ವಿರುದ್ಧ -

ಆರೋಪಿತ : ಹರೀಶ ಜಿ.ಎಂ. ಬಿನ್ ಮರಿಯಪ್ಪ,

ಪ್ರಶ್ನೆ 1:- ನಿಮಗೆ ಮೇಲೆ ತಿಳಿಸಿದ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೇ?

ಉತ್ತರ:

ಪ್ರಶ್ನೆ 2:- ನೀವು ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

ಉತ್ತರ:

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಪ್ರತ್ಯೇಕ ಹಾಳೆಗಳಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ಸ್ಥಳ : ಹೊನ್ನಾಳಿ

ದಿನಾಂಕ: 30-01-2022.

**(ದೇವದಾಸ್ ಹೆಚ್.)**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರು,**
**ಹೊನ್ನಾಳಿ**

Case is calledout, accused is present. Perused the charge sheet materials to frame the charge against the accused. Hence charge is framed same is read over and explained in the language know to him. The accused plead not guilty but claims for trial. Hence case is posted for prosecution evidence.

Issue summons to CW-1.

Call on:

Addl.Civil Judge and JMFC.,
Honnali.